ಹಳೆಯ ಪುಟಗಳನ್ನೆಲ್ಲ ನನ್ನೆದುರು ಫಡಫಡನೆ ತೆರೆದಿಟ್ಟಳು ಗೆಳತಿ ನಯನಾ. ನಾನು ಈ ನಮ್ಮ ಅಪಾರ್ಟ್‌ಮೆಂಟಿಗೆ ಬಂದು ಹತ್ತು ವರ್ಷಗಳಾಗಿದ್ದರೂ ಸುತ್ತಮುತ್ತಲಿನ ಸಣ್ಣ ಜಗತ್ತು ಹೇಗೆ ತಿರುಗುತ್ತಿದೆ ಎಂಬ ಅರಿವು ಕೂಡಾ ಆಗದಂತೆ ಕಣ್ಣು, ಕಿವಿಗಳನ್ನು ಮುಚ್ಚಿಕೊಂಡು ನನ್ನದೇ ವಿಶ್ವದಲ್ಲಿ ಕಳೆದುಹೋಗಿದ್ದೆ.

ದಿನಾಲೂ ಅಲಾರ್ಮ್ ಕೂಗಿದೊಡನೇ ಎದ್ದು ನಿತ್ಯದ ಕೆಲಸಗಳನ್ನು ಶುರು ಮಾಡಿದರೆ ಉಸಿರು ಬಿಡುವುದಕ್ಕೂ ಯೋಚಿಸಬೇಕಾದಷ್ಟು ಗಡಿಬಿಡಿ. ಅಡುಗೆ ಮಾಡಿ, ಎರಡೆರಡು ಡಬ್ಬಿಗಳನ್ನು ಕಟ್ಟಿಕೊಂಡು, ಮಕ್ಕಳಿಗೂ ಡಬ್ಬಿ ಕಟ್ಟಿ, ಮನೆಯವರಿಗೆ ಮುಂಜಾನೆಯ ತಿಂಡಿ, ಮಧ್ಯಾಹ್ನದ ಊಟಕ್ಕೆ ಬೇಕಾಗುವ ಪದಾರ್ಥಗಳನ್ನೆಲ್ಲ ಮಾಡಿ, ಡೈನಿಂಗ್ ಟೇಬಲ್ ಮೇಲೆ ಜೋಡಿಸಿಟ್ಟು, ಎಂಟು ಗಂಟೆಗೇ ಓಡಿ ಹೋಗಬೇಕಿತ್ತು. ನಲವತ್ತೈದು ಕಿಲೋಮೀಟರ್ ದೂರದ ಊರಿನ ಸರ್ಕಾರಿ ಕಾಲೇಜಿಗೆ ಹತ್ತು ಗಂಟೆಯ ಒಳಗೆ ಹೋಗಿ ತಲುಪುವುದೇ ಪ್ರತಿದಿನದ ಆದ್ಯತೆ ಮತ್ತು ಪರಮ ಗುರಿ. ಕೆಲಸ ಮುಗಿಸಿ ಬಳಲಿದ ಜೀವ ಬಸ್ಸಿಗೆ ಜೋತುಬಿದ್ದು ಮನೆ ಸೇರುವಷ್ಟರಲ್ಲಿ ಸುಸ್ತು ಹೊಡೆದಿರುತ್ತಿತ್ತು. ಸಂಜೆ ಬಂದು ಗೂಡು ಸೇರಿದವಳು ಮತ್ತೆ ತಲೆ ಹೊರಹಾಕುತ್ತಿರಲಿಲ್ಲ. ಶನಿವಾರಗಳಂದು ಮಾತ್ರ ಪಕ್ಕದ ಓಣಿಯಲ್ಲಿಯೇ ಇರುವ ಮಾರುತಿ ಮಂದಿರಕ್ಕೆ ಹೋಗುವುದನ್ನು ಪ್ರಯತ್ನಪೂರ್ವಕವಾಗಿ ರೂಢಿಸಿಕೊಂಡಿದ್ದೆ – ಒಂದಿಷ್ಟು ಹೆಜ್ಜೆಗಳ ವಾಕಿಂಗು, ಒಂಚೂರು ತಂಗಾಳಿ ದೇಹಕ್ಕೆ, ಮನಸ್ಸಿಗೆ ಬೇಕು ಎನ್ನುವ ಪ್ರಜ್ಞೆಯಿಂದ. ಆವತ್ತೊಂದೇ ದಿನ ಪಕ್ಕದ ಮನೆಯ ನಯನಾಳ ಜೊತೆ ಒಂದಿಷ್ಟು ಹರಟೆ, ಮಾತುಗಳು. ಒಮ್ಮೊಮ್ಮೆ ಅವಳೂ ಗುಡಿಗೆ ಜೊತೆಯಾಗುವಳು. ನಡೆದುಕೊಂಡು ಹೋಗಿ ದೇವಸ್ಥಾನದ ಮುಖ್ಯ ದೇವರಾದ ಹನುಮಂತನಿಗೆ ಕೈ ಮುಗಿದು ಪ್ರದಕ್ಷಿಣೆ ಹೊರಟರೆ ದತ್ತಾತ್ರೇಯ, ಶಂಕರ, ಗಣಪತಿ, ಗುಂಡಪ್ಪ, ನಾಗಪ್ಪ ದೇವರ ಸಣ್ಣ ಸಣ್ಣ ಗುಡಿಗಳೊಳಗೆ ಹೊಕ್ಕು ಹೊರಬರುವಷ್ಟರಲ್ಲಿ ನಾಲ್ಕಾರು ಪರಿಚಯದ ಮುಖಗಳು ಕಂಡು ನಗುವಿನ ವಿನಿಮಯವಾಗುತ್ತದೆ. ಖಾಸಾ ಗೆಳತಿಯರು, ಬಂಧುಗಳು ಭೆಟ್ಟಿಯಾದರೆ ಒಂದೆರಡು ಸುಖ ದುಃಖದ ಮಾತುಗಳು. ಅನಂತರ ದೊಡ್ಡ ಪೌಳಿಯ ಎದುರುಗಡೆ ಇರುವ ಎತ್ತರದ ಕಟ್ಟೆಯ ಮೇಲೆ ಸುಮ್ಮನೆ ಕುಳಿತು ಬರುಹೋಗುವವರನ್ನು ನೋಡುವುದು ನನ್ನ ಪ್ರಿಯವಾದ ಹವ್ಯಾಸ. ಅದಷ್ಟು ಹೊತ್ತು ಯಾವುದೇ ಟೆನ್ಶನ್ ಇಲ್ಲದೇ, ಯೋಚನೆಯಿಲ್ಲದೇ, ಮನಸ್ಸು ಸ್ವಚ್ಛ ಖಾಲಿಯಾಗಿದ್ದು, ಕೇವಲ ಕಣ್ಣಿಗೆ ಕಂಡದ್ದನ್ನು ಮಾತ್ರ ಮನಸ್ಸಿನೊಳಗೆ ಇಳಿಸುತ್ತ, ದಿವ್ಯ ನಿರ್ಲಿಪ್ತಿಯನ್ನು ಅನುಭವಿಸುತ್ತಿರುತ್ತದೆ. ಮಾತುಗಳನ್ನು ಆಡುತ್ತ ಅಂಥ ಸಮಯವನ್ನು ಕಳೆದುಕೊಳ್ಳಲು ನಾನು ಇಚ್ಛಿಸುವುದಿಲ್ಲ ಎನ್ನುವುದು ಸದಾ ವಟಗುಟ್ಟುವ ನಯನಾಳಿಗೂ ತಿಳಿದಿದೆ.

ನಮ್ಮ ನಾಲ್ಕಂತಸ್ತಿನ ಅಪಾರ್ಟ್‌ಮೆಂಟ್ ಪಕ್ಕವೇ ಅವಳ ಒಂದಂತಸ್ತಿನ ಪುಟ್ಟ ಮನೆ. ಅವಳ ತೌರುಮನೆಯೂ ಹತ್ತಿರವೇ ಇದೆ. ಹೀಗಾಗಿ ಇದೇ ಏರಿಯಾದಲ್ಲಿ ಹುಟ್ಟಿ, ಇಲ್ಲಿಯೇ ಆಡಿ, ಓಡಾಡಿ ಬೆಳೆದವಳು. ಊರ ಉಸಾಬರಿ ಮಾಡುವ ಗುಣವೂ ಇರುವುದರಿಂದ ಸುತ್ತಲಿನ ಜಗತ್ತಿನ ಸಕಲ ಜೀವಿಗಳ ಜಾತಕಗಳು ಇವಳ ನೆನಪಿನ ಜೋಳಿಗೆಯಲ್ಲಿ ಭದ್ರವಾಗಿವೆ. ಅವರ ಇಂದಿನ, ಹಿಂದಿನ ಚಲನವಲನಗಳೆಲ್ಲ ತನ್ನ ಅಂಗೈ ಮೇಲಿನ ಗೆರೆಗಳಷ್ಟು ಪರಿಚಿತವೆನ್ನುವ ಭಾವದಲ್ಲಿ ಅವಳು ಮಾತನಾಡುವುದನ್ನು ನೋಡಿ ಒಮ್ಮೊಮ್ಮೆ ನಗು ಬರುತ್ತದೆ, ಒಮ್ಮೊಮ್ಮೆ ಬೇಸರವಾಗುತ್ತದೆ. ಹೊಸಬರು ಬಂದಾಗಲೂ ಇವಳೇ ಬಳಿಸಾರಿ ನಕ್ಕು ಮಾತನಾಡಿ ಗೆಳೆತನಕ್ಕೆ ಕೈ ಚಾಚುವಳು. ಅವಳ ಈ ಗುಣದಿಂದಲೇ ನನ್ನಂಥ ಕಡಿಮೆ ಮಾತನಾಡುವ, ಆಜೂ ಬಾಜೂ ಮನೆಗಳಲ್ಲಿ ಯಾರಿದ್ದಾರೆಂದೂ ತಲೆ ಕೆಡಿಸಿಕೊಳ್ಳದವಳ ಜೊತೆಗೂ ಕೆದರಿ ಕೆದರಿ ಮಾತನಾಡಲು ಶುರು ಮಾಡಿದ್ದಳು. ಶುರುಶುರುವಿಗೆ ನಾನು ಅಷ್ಟಾಗಿ ತೆರೆದುಕೊಂಡಿರಲಿಲ್ಲ. ನನಗೆ ಬೇಕೂ ಇರಲಿಲ್ಲ.